Literacy for a Billion

Movie: Swabhimana
Year: 1985

Song: Haalu Jenu Serida Hanga
Lyricist: R N Jayagopal

ಹಾಲು ಜೇನು ಸೇರಿದ ಹಂಗೆ
ಪ್ರೀತಿ ಸಂಸಾರ
ಆ ಬಾಳೆ ಬಂಗಾರ
ಗಂಡ ಹೆಂಡ್ತಿ ಎರಡು ಕಣ್ಣು
ಮನೆಗೆ ಆಧಾರ
ಅಂತ ತಿಳಿದೋರು ಅಂತಾರ
ಎತ್ತು ಏರೀಗ್ ಎಳೆದಾಗ
ಕೋಣ ನೀರೀಗ್ ಎಳೆದಾಗ
ಗಾಡಿ ಗತಿ ಏನಾಗ
ಹಾಕಿದ್ದಂಗೆ ಅದು ಲಾಗ
ಎಲ್ಡು ಕಣ್ಣು ಇದ್ರೂ ಏನು
ಬಾಳೆ ಆಗ ಗಂಡಾಗುಂಡಿ
ಹಾಲು ಜೇನು ಸೇರಿದ ಹಂಗೆ
ಪ್ರೀತಿ ಸಂಸಾರ
ಆ ಬಾಳೆ ಬಂಗಾರ

ಮಾತು ಮುತ್ತು ಎರಡನ
ಮಾಡಬೇಕು ಜೋಪಾನ
ಆಡಿದ್ ಮಾತು ಮರೆಯೋಲ್ಲ
ಒಡೆದ ಮುತ್ತು ಸೇರೋಲ್ಲ
ಮಾತು ಮುತ್ತು ಎರಡನ
ಮಾಡಬೇಕು ಜೋಪಾನ
ಆಡಿದ್ ಮಾತು ಮರೆಯೋಲ್ಲ
ಒಡೆದ ಮುತ್ತು ಸೇರೋಲ್ಲ
ಅಹಂಕಾರ ಬಂದ ಮನದಿಂದ
ಮನೆ ನರಕವು
ತಗ್ಗಿ ನಡೆದಾಗ ಅನುರಾಗ
ನಗು ಹೂಬನವು
ಹಾಲು ಜೇನು ಸೇರಿದ ಹಂಗೆ
ಪ್ರೀತಿ ಸಂಸಾರ
ಆ ಬಾಳೆ ಬಂಗಾರ

ಗಂಡ ಹೆಂಡ್ರ ಕಿತ್ತಾಟ
ಉಂಡು ಮಲಗೋ ಗಂಟಾನೆ
ಮರಿಬೇಕು ಹಾಗೇನೆ
ಮಾಮೂಲಂಗೆ ಮುಚ್ಚಾನೆ
ಗಂಡ ಹೆಂಡ್ರ ಕಿತ್ತಾಟ
ಉಂಡು ಮಲಗೋ ಗಂಟಾನೆ
ಮರಿಬೇಕು ಹಾಗೇನೆ
ಮಾಮೂಲಂಗೆ ಮುಚ್ಚಾನೆ
ಬೆರೆತಿಹ ಮನದೆ
ಬರಲೇಕೆ ಈ ಅಂತರ
ಪ್ರೀತಿಯ ಬೆಳಕು ಉರಿಬೇಕು
ಈ ಮೊದಲ ಥರ
ಹಾಲು ಜೇನು ಸೇರಿದ ಹಂಗೆ
ಪ್ರೀತಿ ಸಂಸಾರ
ಆ ಬಾಳೆ ಬಂಗಾರ
ಗಂಡ ಹೆಂಡ್ತಿ ಎರಡು ಕಣ್ಣು
ಮನೆಗೆ ಆಧಾರ
ಅಂತ ತಿಳಿದೋರು ಅಂತಾರ

*PlanetRead is a tax-exempt, not-for-profit: 501(c) (3) in the United States and 80(G) in India.*

ಎತ್ತು ಏರೀಗ್ ಎಳೆದಾಗ
ಕೋಣ ನೀರೀಗ್ ಎಳೆದಾಗ
ಗಾಡಿ ಗತಿ ಏನಾಗ
ಹಾಕಿದ್ದಂಗೆ ಆದು ಲಾಗ
ಎಲ್ಡು ಕಣ್ಣು ಇದ್ರೂ ಏನು
ಬಾಳೆ ಆಗ ಗಂಡಾಗುಂಡಿ

ತಾನೀ ತಾನೀ ತಾನನ ನಾನೀ
ತಾನೀ ತಂದಾನ
ತಾನೀ ತಂದಾನ
ತಂದನ ತಾನೀ ತಂದಾನ
ತಂದನ ತಾನೀ ತಂದಾನ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*